# ಶ್ರೀಮಂತ ಭಾಷೆ ಕನ್ನಡ



ವಿಜಯವಾಣಿ ಚಿತ್ರ

**ಆನೇಕಲ್ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.**

■ ವಿಜಯವಾಣಿ ಸುದ್ದಿಜಾಲ ಆನೇಕಲ್

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ವಿಶ್ವದ ಅತ್ಯಂತ ಶ್ರೀಮಂತ ಭಾಷೆಯಾಗಿದೆ ಎಂದು ಕವಿ ಪ್ರೊ.ಬಿ.ಎಸ್.ಸತ್ಯೇಶ ಬೆಳ್ಳೂರ್ ಅಭಿಪ್ರಾಯಪಟ್ಟರು.

ಪಟ್ಟಣ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಯುವ ಜನತೆಗೆ ಭಾಷಾಭಿಮಾನ ಪ್ರಜ್ಞೆ ಬೆಳೆಸುವ ನಿಟ್ಟಿನಲ್ಲಿ ಬೋಧಕ ಸಿಬ್ಬಂದಿ ಯೋಜನೆ ರೂಪಿಸಬೇಕು ಎಂದರು.

ಅಲಯನ್ಸ್ ಕಾಲೇಜಿನ ಸಹ ಕುಲಪತಿ ಅಭಯ್ ಜಿ.ಚೆಬ್ಬಿ ಮಾತನಾಡಿ, ಕನ್ನಡ ರಾಜ್ಯೋತ್ಸವ ಎಲ್ಲರ ಹಬ್ಬವಾಗಬೇಕು. ಕನ್ನಡ ನಾಡು ಶ್ರೀಮಂತ ಸಾಂಸ್ಕೃತಿಕ ಪರಂಪರೆ ಬೀಡಾಗಿದೆ. ಎಲ್ಲರಿಗೂ ಆಶ್ರಯ ಕೊಡುವ ಉದಾರ ಗುಣ ಈ ನಾಡಿಗಿದೆ ಎಂದರು. ವಿಶ್ವವಿದ್ಯಾಲಯದ ಗಣಕಯಂತ್ರ ವಿಭಾಗದ ರಾಘವೇಂದ್ರ ರಾಜು ಅವರು ರಚಿಸಿರುವ ಪತ್ತೇದಾರಿ ಕಾದಂಬರಿ ದ್ವೈತ, ರಸಾಯನ ಶಾಸ್ತ್ರ ಪ್ರಾಧ್ಯಾಪಕ ಡಾ.ಚಿತ್ರಾಕರ ಹೆಗಡೆ, ಗಣಕ ವಿಜ್ಞಾನ ಪ್ರಾಧ್ಯಾಪಕ ಡಾ.ಆರ್.ಶೇಖರ ರಚಿಸಿರುವ ಬಿಗಿನ್ನರ್ಸ್ ಫೋರೆನಿಕ್ಸ್ ಸೈನ್ಸ್ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ವಿಶ್ವವಿದ್ಯಾಲಯ ಸಿಬ್ಬಂದಿ ಪ್ರಕಾಶ್.ಎಸ್. ಬೂದೂರು, ಸುರೇಖಾ ಶೆಟ್ಟಿ, ಡಾ.ಲಿಜು ಜೇಕಬ್, ಪ್ರೊ.ಕಸಾನಿಯಾ ನಾಯಕ್ ಇತರರು ಇದ್ದರು.